# ಆಹಾ ಸುದ್ದಿ!

★ ಸಸಿತೋಟ



ಮನೆಯಲ್ಲಿದ್ದ ವಸ್ತುಗಳನ್ನು ಕಳವು ಮಾಡಿರುವುದನ್ನು ಕೇಳಿದ್ದೇವೆ. ಆದರೆ ಮನೆಯನ್ನೇ ಕಳವು ಮಾಡುವುದೆಂದರೆ..! ಕ್ಯಾಲಿಫೋರ್ನಿಯಾದ ಹಾಡುಗಾರ್ತಿ ಮಾಲಿಂದಾ ತನ್ನ ನಾಯಿಯನ್ನು ವಾಕಿಂಗ್‌ಗೆ ಕರೆದುಕೊಂಡು ಹೋಗಿ ಬರುವುದರೊಳಗಾಗಿ ಆಕೆಯ ಪುಟ್ಟ ಮನೆಯನ್ನೇ ಕದ್ದುಕೊಂಡು ಹೋಗಿದ್ದಾರಂತೆ. 33X8 ಅಡಿ ಅಳತೆಯ ಈ ಮನೆಯನ್ನು 50 ಸಾವಿರ ಡಾಲರ್ ವೆಚ್ಚದಲ್ಲಿ ಆಕೆ ಕಟ್ಟಿಕೊಂಡಿದ್ದಳಂತೆ. ಈಗಾದರೆ 'ಮನೆ ಕಳವು' ಎಂಬ ಶೀರ್ಷಿಕೆ ಸರಿ ಹೋಗಬಹುದು.



ಅರ್ಜೆಂಟೀನಾದಲ್ಲಿ ಸದ್ಯ ರಾಷ್ಟ್ರೀಯ ಬಿಯರ್ ಹಬ್ಬ ಅಕ್ಟೋಬರ್‌ಫೆಸ್ಟ್ ನಡೆಯುತ್ತಿದೆ. ಬೀದಿ ಬೀದಿಯಲ್ಲಿ ಬ್ಯಾರೆಲ್‌ಗಳಿಂದ ಮಳೆಯಂತೆ ಸುರಿಯುವ ಬಿಯರ್ ಧಾರೆಯನ್ನು ಜನ ಮಗ್‌ಗಳಲ್ಲಿ ಹಿಡಿದು ಹೊಟ್ಟೆಗಿಳಿಸುವುದು ಅಲ್ಲಿ ಸಾಮಾನ್ಯ ದೃಶ್ಯ. ಅಲ್ಲಿಯ ಜನ ಪುಣ್ಯ ಮಾಡಿದ್ದರು, ನೀರಿನ ಅಭಾವವಿದ್ದರೂ 'ಎಣ್ಣೆ'ಯ ಕೃಪೆ ಇದೆ ಅಂತಾಯ್ತು.

ನ್ಯೂಯಾರ್ಕ್‌ನ ಔಷಧದ ಮಳಿಗೆಯೊಂದು 'ಪುರುಷ ತೆರಿಗೆ' ಹಾಕಲು ಶುರು ಮಾಡಿದೆಯಂತೆ. ಔಷಧ ಖರೀದಿಸುವ ಪುರುಷರಿಗೆ ಶೇ.7ರಷ್ಟು ತೆರಿಗೆ ಹಾಕುತ್ತಿದ್ದು, ಮಹಿಳೆಯರಿಗೆ ಸಂಪೂರ್ಣ ತೆರಿಗೆ ವಿನಾಯ್ತಿ ನೀಡುತ್ತಿದೆಯಂತೆ. ಅದರ ಒಡತಿ  ಜೂಲಿ ಅಲೊನಿ ಅಮೆರಿಕದ ಅಧ್ಯಕ್ಷೀಯ ಅಭ್ಯರ್ಥಿ ಹಿಲರಿ ಕ್ಲಿಂಟನ್‌ಗೆ ಬೆಂಬಲಿಸಲು, ಸ್ತ್ರೀ ಲಂಪಟ ಟ್ರಂಪ್  ವಿರೋಧಿಸಲು ಈ ಯೋಜನೆ ಶುರು ಮಾಡಿದ್ದಾಳಂತೆ. ಸ್ತ್ರೀ ಲೋಲುಪನ ಅಪರಾಧದ ಹೊರೆಯನ್ನು ಎಲ್ಲಾ ಪುರುಷರು ಹೊರಬೇಕಾಗಿದೆ, ಪಾಪ!

ಥಾಯ್ಲ್ಯಾಂಡ್‌ನಲ್ಲಿ ರಸ್ತೆಯಲ್ಲಿರುವ ಹೊಂಡಗಳ ಬಗ್ಗೆ ಆಡಳಿತದವರ ಗಮನ ಸೆಳೆಯಲು ಅಲ್ಲಿಯ ರೂಪದರ್ಶಿ ತಾಕ್ ಎಂಬಾಕೆ ಟವಲ್ ಸುತ್ತಿಕೊಂಡು ರಸ್ತೆಯಲ್ಲೇ ಸ್ನಾನ ಮಾಡಿದಳಂತೆ. ಅಷ್ಟೇ ಅಲ್ಲ, ಆ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಳಂತೆ. ಆಡಳಿತದ ಗಮನವೆಲ್ಲ ಈಗ ಸಾಮಾಜಿಕ ಜಾಲತಾಣದತ್ತ. ಯಾವಾಗ ರಸ್ತೆ ಪೂರ್ತಿ ಅಧ್ವಾನವಾಗುತ್ತದೆಯೋ ಆಗ ರೂಪದರ್ಶಿಯ ಬಟ್ಟೆಯೂ ಕನಿಷ್ಠವಾಗಬಹುದು ಎಂದು ಕಾಯುತ್ತಿದ್ದಾರಂತೆ.



ಕೋಲ್ಕತ್ತಾದಲ್ಲಿ ನವರಾತ್ರಿ ಸಂದರ್ಭದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದವರು ಸ್ಥಾಪಿಸಿದ ದುರ್ಗಾ ಮ'ಮಾತಾ' ಮೂರ್ತಿ. ಮಾಮೂಲು ಬಿಳಿ– ನೀಲಿ ಸೀರೆ, ಚಪ್ಪಲಿ ಧರಿಸಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯ ಮೂರ್ತಿ ದುರ್ಗೆಯಂತೆ 12 ಕೈಗಳನ್ನು ಹೊಂದಿದ್ದು, ಸದ್ಯ 'ದೀದಿ'ಮಾತೆಯಾಗಿ ಬಡ್ತಿ ಪಡೆದಿದ್ದಾರೆ. ಮುಂದಿನ ವರ್ಷ ಯಾವುದಕ್ಕೆ ಬಡ್ತಿ ಪಡೆಯುತ್ತಾರೋ!



ಅಮೆರಿಕದಲ್ಲಿ ಭೀತಿ ಹುಟ್ಟಿಸುವ ಮುಖವಾಡಗಳನ್ನು ತೊಟ್ಟು ಮಕ್ಕಳನ್ನಷ್ಟೇ ಅಲ್ಲ, ದೊಡ್ಡವರನ್ನೂ ಬೆಚ್ಚಿ ಬೀಳಿಸುವವರ ಸಂಖ್ಯೆ ಜಾಸ್ತಿಯಾಗಿದೆಯಂತೆ. ಇದು ಆಸ್ಟ್ರೇಲಿಯಕ್ಕೂ ಹರಡಿದ್ದು ಪೊಲೀಸರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆಯಂತೆ. ಅಲ್ಲಿಯ ಮನಃಶಾಸ್ತ್ರಜ್ಞರಿಗೂ ಇದರ ಮರ್ಮ ಗೊತ್ತಾಗದೇ ಕಂಗಾಲಾಗಿದ್ದಾರಂತೆ. ಈ ತಲೆನೋವನ್ನು  ಟಿವಿ ನಿರೂಪಕರಿಗೆ ದಾಟಿಸಿದ್ದರೆ ಕ್ಷಣಮಾತ್ರದಲ್ಲಿ ಪರಿಹಾರ ಸಿಕ್ಕಿಬಿಡುತ್ತಿತ್ತು!